APPENDIX-J

## ಊಟಕ್ಕೆ ಮೊದಲು ಉಪ್ಪಿನಕಾಯಿ

(ಹಿರಿಯ ಪ್ರಾಥಮಿಕ ಆರನೆಯ ತರಗತಿ ವಿದ್ಯಾರ್ಥಿಗಳಿಗೆ)

"ಊಟಕ್ಕೆ ಮೊದಲು ಉಪ್ಪಿನಕಾಯಿ" ಎಂಬುದೊಂದು ನಮ್ಮಲ್ಲಿರುವ ಗಾದೆ ಮಾತು. ಉಪ್ಪಿನಕಾಯಿ ಇಲ್ಲದೆ ಊಟವಿಲ್ಲ, ಊಟ ಸವಿಯಾಗದು, ರುಚಿಸದು ಎಂದು ಬಹುಶ: ಈ ಮಾತನ್ನು ಹೇಳಿದ್ದಾರೋ ಏನೋ! ಮನೆಗಳಲ್ಲಿ ಒಂದೊಂದು ದಿನ ಅದೂ ಬೆಳವಲ ನಾಡಿನಲ್ಲಿ ಉಪ್ಪಿನಕಾಯಿಯಿಲ್ಲದೆ ನಡೆದೀತು, ಮಲೆನಾಡಿನಲ್ಲಿ ಮತ್ತು ಭೋಜನಾಲಯಗಳಲ್ಲಿ ಉಪ್ಪಿನಕಾಯಿಯಿಲ್ಲದೇ ಊಟ ಮುಂದೆ ಸಾಗುವುದಿಲ್ಲ. ಇಂದು ಅದು ಇನ್ನೂ ಹೆಚ್ಚು ಜನಪ್ರಿಯವಾಗಿದೆ. ಮಾವು ಮತ್ತು ನಿಂಬೆಗಳ ಉಪ್ಪಿನಕಾಯಿ ಪರಿಚಯ ಮಾತ್ರವಿದ್ದ ನಮಗೆ, ಮೆಣಸಿನಕಾಯಿ, ಸವತೆಕಾಯಿ, ಗಜ್ಜರಿ, ಹಾಗಲಕಾಯಿ ಅಲ್ಲದೇ ಸಮ್ಮಿಶ್ರ ಉಪ್ಪಿನಕಾಯಿಗಳ ರುಚಿ ಹತ್ತಿದೆ. ಉಪ್ಪಿನಕಾಯಿಯ ಉತ್ಪಾದಕರು ತಮ್ಮ ನಾನಾ ವಿಧಾನದ ಉತ್ಪಾದನೆಗಳಿಂದ ಜನರಲ್ಲಿ ಈ ಅಭಿರುಚಿಯನ್ನು ಇನ್ನೂ ಹೆಚ್ಚಿಸಿರುವರು.

ಬೇಡೇಕರ ಮಸಾಲೆ, ಉಪ್ಪಿನಕಾಯಿಯ ಹೆಸರನ್ನು ನಾನು ಮುಂಬಯಿಗೆ ಹೋದಾಗ ಕೇಳಿದ್ದೆ. ಕೆಲ ದಿನಗಳ ನಂತರ ನಮ್ಮಲ್ಲಿಗೂ ಅದು ಬಂದಿತು. ಆದರೆ ನಮ್ಮ ಸಮೀಪದ ಬೆಳಗಾವಿಯಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಉಪ್ಪಿನಕಾಯಿಯ ಉತ್ಪಾದನೆ ನಡೆಯುತ್ತಿದೆ ಎನ್ನುವ ಮಾತು ಅನೇಕರಿಗೆ ಗೊತ್ತಿರಲಿಕ್ಕಿಲ್ಲ.

ಬೆಳಗಾವಿಯಲ್ಲಿ ಶ್ರೀ ಕಲ್ಯಾಣ ಚಿಂತಾಮಣರಾವ್ ಪಾಟಣಕರ ಹಾಗೂ ಅವರ ಮಕ್ಕಳೇ ಈ ಶುಚಿಯಾದ ಉಪ್ಪಿನಕಾಯಿ ಹಪ್ಪಳ ಮಸಾಲೆಗಳ ತಯಾರಕರು. 1945 ರಲ್ಲಿ ಅವರು ಈ ಉದ್ಯಮವನ್ನು ಪ್ರಾರಂಭಿಸಿದರು. ಮೊದಲು ಇದು ಸಣ್ಣ ಪ್ರಮಾಣದಲ್ಲಿತ್ತು. ದ್ವಿತೀಯ ಮಹಾಯುದ್ಧದ ನಂತರ ಅವರು ವ್ಯಾಪಾರದಲ್ಲಿ ಪ್ರವೇಶಿಸಿ ಅಭಿವೃದ್ಧಿ ಹೊಂದಲು ಕಾರಣವಾಗಿದ್ದ ಬಿಸ್ಕೀಟು ಮಾರ್ಕೆಟ ಒಮ್ಮೆಲೆ ಕಡಿಮೆಯಾಗಿ ಅವರ ಉತ್ಪನ್ನಕ್ಕೆ ಬಲವಾದ ಪೆಟ್ಟು ಬಿತ್ತು. ಆಗ ಶ್ರೀ ಕಲ್ಯಾಣ ಪಾಟಣಕರರು ಈ ಹೊಸ ಉದ್ದಿಮೆಯನ್ನು ಹುಡುಕಿಕೊಂಡರು.

ಉದ್ದಿಮೆ ಬೆಳೆದಂತೆ ಅವರು ಎಲ್ಲ ಕೆಲಸವನ್ನೂ ಕೈಯಿಂದ ಮಾಡುವುದು ಅಸಾಧ್ಯವಾಯಿತು. ಅಲ್ಲದೆ ಬಿಡಿಯಾಗಿ ಕಳಿಸಿ ಮಾರಾಟ ವ ನಡೆಸುವುದು ಕಷ್ಟಸಾಧ್ಯವಾಯಿತು. ಈಗ ಏಳು ವರ್ಷಗಳಿಂದ ಅವರು ಉಪ್ಪಿನಕಾಯಿಯನ್ನು ಬಾಟಲಿಗಳಲ್ಲಿ ತುಂಬಿ ಮಾರತೊಡಗಿರುವರು. ಇದು ಉಪ್ಪಿನಕಾಯಿ ಮಾರಾಟವನ್ನು ಜನಪ್ರಿಯಗೊಳಿಸಿರುವುದು. ಉಪ್ಪಿನಕಾಯಿಯನ್ನು ಬಾಟಲಿಯಲ್ಲಿ ತುಂಬಿಸುವ ಶೀಲು ಮಾಡುವ ಉಪಕರಣಗಳನ್ನು ಹೊಂದಿಸಿಕೊಳ್ಳಬೇಕಾಯಿತು. ಅವರ ಪುತ್ರ ಮಧುಕರರು ಈ ಉಪ್ಪಿನಕಾಯಿ ತುಂಬುವ ಯಂತ್ರವನ್ನು ಶೋಧಿಸಿದರು. ಅಲ್ಲದೆ ಮಸಾಲೆಗೆ ಅವಶ್ಯವಿರುವ ಕೊಬ್ಬರಿ ಹೆರೆಯುವ ಯಂತ್ರವನ್ನು ಅವರು ಕಂಡು ಹಿಡಿದರು. ಈಗ ಪಾಟಣಕರರ ಉದ್ದಿಮೆಯಲ್ಲಿ ಈ ಯಂತ್ರಗಳು ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿರುವವು.

ಶ್ರೀ ಕಲ್ಯಾಣ ಪಾಟಣಕರರು ಈಗ 60 ವರ್ಷ ಮೀರಿದ್ದಾರೆ. ಆದರೂ ಅವರ ಉತ್ಸಾಹ ತರುಣರನ್ನು ನಾಚಿಸುವಂತಿದೆ. ಅವರಿಗೆ ಸಹಾಯಕರಾಗಿ ಅವರ ಇಬ್ಬರು ಪುತ್ರರು ಮಧುಕರ ಮತ್ತು ಬಾಪೂ ಇದ್ದಾರೆ. ಮನೆಯವರೇ ಸೇರಿ ನಡೆಸಿರುವ ಈ ಗೃಹೋದ್ಯಮವು ಎಲ್ಲ ಗೃಹಿಣಿಯರಿಗೂ ಒಂದು ವರವಾಗಿ ಪರಿಣಮಿಸಿದೆ.

---

ಸಾಮಾನ್ಯ ಸೂಚನೆಗಳು:

1) ನಿಮಗೆ ಕೊಟ್ಟಿರುವ [illegible]

ಅವುಗಳಲ್ಲಿ ಒಂದು ಮಾತ್ರ ಸರಿಯಾದ ಉತ್ತರ. ಆ ಸರಿಯಾದ ಉತ್ತರದ ಪಕ್ಕ ದಲ್ಲಿರುವ ಸಂಖ್ಯೆಯನ್ನು ✓ ಚಿಹ್ನೆಯಿಂದ ಗುರುತಿಸಿರಿ.

ಉದಾಹರಣೆ:

ಒಂದು ಊರಿನಲ್ಲಿ ಒಬ್ಬ ಬೇಡನಿದ್ದನು. ಅವನ ಹೆಸರು ಭರಮ. ಅವನು ಬಹಳ ಬಡವ. ತನ್ನ ತಂದೆ ಬಿಟ್ಟುಹೋದ ಬಲೆಯೊಂದೇ ಅವನ ಆಸ್ತಿಯಾಗಿತ್ತು. ಅದು ಹಕ್ಕಿ ಗಳನ್ನು ಹಿಡಿಯುವ ಬಲೆ. ಭರಮನು ದಿನವೂ ಗಿಡದ ಮೇಲೆ ಬಲೆಒಡ್ಡಿ ಒಂದೆರಡು ಹಕ್ಕಿಗಳನ್ನು ಹಿಡಿಯುತ್ತಿದ್ದನು. ಅವುಗಳನ್ನು ಮಾರಿ ಹೊಟ್ಟೆ ಹೊರೆದುಕೊಳ್ಳು ತಿದ್ದನು.

ಪ್ರಶ್ನೆ: ಭರಮನ ತಂದೆ ಅವನಿಗಾಗಿ ಬಿಟ್ಟುಹೋದ ಆಸ್ತಿ

1. ಮೊಲಗಳನ್ನು ಹಿಡಿಯುವ ಬಲೆ
2. ಬಡತನವನ್ನು ನೀಗಿಸುವ ವಿಧಾನ
3. ಕಾಡಿನಲ್ಲಿರುವ ಗಿಡಗಳು ಮತ್ತು ಹಕ್ಕಿಗಳು
4. ✓ ಹಕ್ಕಿಗಳನ್ನು ಹಿಡಿಯುವ ಬಲೆ

4ನೆಯದು ಸರಿಯಾದ ಉತ್ತರ. ಆದುದರಿಂದ ಅದನ್ನು ✓ ಹಾಕಿ ಸೂಚಿಸಲಾಗಿದೆ. ಮುಂದುವರಿಯಿರಿ.

1. ಗಾದೆಯ ಮಾತಿನ ಪ್ರಕಾರ ಕೆಳಗಿನವುಗಳಲ್ಲಿ ಯಾವುದಿದ್ದರೆ ಊಟ ಹೆಚ್ಚು ರುಚಿ.
   1. ಚಟ್ನಿ
   2. ಹಪ್ಪಳ
   3. ಉಪ್ಪಿನಕಾಯಿ
   4. ಪಲ್ಯ.

2. ಕೆಳಗಿನ ಯಾವ ಉಪ್ಪಿನಕಾಯಿಗಳು ವಿಶೇಷವಾಗಿ ಬಳಕೆಯಲ್ಲಿವೆ.
   1. ಮಾವಿನಕಾಯಿ, ನಿಂಬೆಕಾಯಿ
   2. ಮೆಣಸಿನಕಾಯಿ, ಸವತೆಕಾಯಿ
   3. ಗಜ್ಜರಿ (ಕ್ಯಾರೆಟ್), ಹಾಗಲಕಾಯಿ
   4. ನೆಲ್ಲಿಕಾಯಿ, ಪುಂಡಿಪಲ್ಲೆ

3. ದೊಡ್ಡ ಪ್ರಮಾಣದ ಉಪ್ಪಿನಕಾಯಿಯ ಉದ್ದಿಮೆ
   1. ಧಾರವಾಡದಲ್ಲಿದೆ
   2. ಕಲಬುರ್ಗಿಯಲ್ಲಿದೆ
   3. ಬೆಳಗಾವಿಯಲ್ಲಿದೆ
   4. ತುಮಕೂರಿನಲ್ಲಿದೆ.

4. ಪಾಟಣಕರರು ಉಪ್ಪಿನಕಾಯಿ ಉದ್ದಿಮೆ ಆರಂಭಿಸಿದ ಕಾರಣ.
   1. ಅವರಿಗೆ ಬೇರೆ ಉದ್ಯೋಗ ಸಿಗದೆ ಇದ್ದುದು
   2. ಅವರ ಬಿಸ್ಕೀಟು ವ್ಯಾಪಾರ ನಿಂತುಹೋದದ್ದು
   3. ಜನರ ಬೇಡಿಕೆ ಹೆಚ್ಚಾದದ್ದು
   4. ಈ ಉದ್ಯಮ ಬಹಳ ಸರಳ ಎಂದು.

5. ''ಊಟಕ್ಕೆ ಮೊದಲು ಉಪ್ಪಿನಕಾಯಿ'' ಎಂದರೆ:
   1. ಮೊದಲು ಉಪ್ಪಿನಕಾಯಿ ತಿಂದು ನಂತರ ಊಟ ಮಾಡಬೇಕು
   2. ಊಟದ ನಡುನಡುವೆ ಉಪ್ಪಿನಕಾಯಿ ತಿನ್ನುತ್ತಿರಬೇಕು
   3. ಉಪ್ಪಿನಕಾಯಿ ಇಲ್ಲದೆ ಊಟ ಸವಿಯಾಗದು, ರುಚಿಸದು
   4. ಮೊದಲು ಊಟಮಾಡಿ ಕೊನೆಗೆ ಉಪ್ಪಿನಕಾಯಿ ತಿನ್ನಬೇಕು.

6. ಶ್ರೀ ಪಾಟಣಕರರ ಉತ್ಸಾಹ ತರುಣರನ್ನು ನಾಚಿಸುವಂತಿದೆ ಎಂದರೆ:
   1. ಅವರ ಉತ್ಸಾಹ ಅನಾವಶ್ಯಕವಾಗಿದೆ
   2. ಅವರಷ್ಟು ಉತ್ಸಾಹವನ್ನು ತರುಣರೂ ತೋರಲಾರರು
   3. ಅವರನ್ನು ಕೂಡಿಸಿ ತರುಣರೇ ಕೆಲಸ ಮಾಡಬೇಕು
   4. ತರುಣರು ನಾಚಲೆಂದೇ ಅವರು ಕೆಲಸ ಮಾಡುತ್ತಾರೆ.

7. ಎಲ್ಲ ಗೃಹಿಣಿಯರಿಗೂ ಇದು (ಉಪ್ಪಿನಕಾಯಿ ಉದ್ದಿಮೆ) ಒಂದು ವರವಾಗಿ ಪರಿಣಮಿಸಿದೆ.
   1. ಇದು ಮನೆಯ ಯಜಮಾನಿಗೆ ದೇವರು ಕೊಟ್ಟ ವರ
   2. ಮನೆಯ ಯಜಮಾನಿಗೆ ಪುಕ್ಕಟೆ ಸಿಕ್ಕುವಂಥದು
   3. ದೇವರು ವರ ಕೊಟ್ಟರೆ ಹೇಗೋ ಹಾಗೆ ಲಾಭದಾಯಕ
   4. ಮನೆಯ ಯಜಮಾನಿ ದಾನ ಪಡೆದ ನಾಣ್ಯ

8. ಶ್ರೀ ಕಲ್ಯಾಣ ಪಾಟಣಕರರು ತಮ್ಮ ಉದ್ದಿಮೆ ಸ್ಥಾಪಿಸಿದ್ದು
   1. ದ್ವಿತೀಯ ಮಹಾಯುದ್ಧದ ಮೊದಲು
   2. ದ್ವಿತೀಯ ಮಹಾಯುದ್ಧದ ಮಧ್ಯದಲ್ಲಿ
   3. ದ್ವಿತೀಯ ಮಹಾಯುದ್ಧದ ನಂತರ
   4. ಬಿಸ್ಕೀಟ ಕಾರಖಾನೆಯ ಜೊತೆಗೆ

9. ಶ್ರೀ ಮಧುಕರರ ಯಂತ್ರಗಳ ಶೋಧ
   1. ಪಾಟಣಕರರ ಉದ್ದಿಮೆಯ ಆರಂಭದಲ್ಲಿ
   2. ಕೈಯಿಂದ ಉಪ್ಪಿನಕಾಯಿ ತುಂಬುವುದು ಕಷ್ಟವಾದ ನಂತರ
   3. ಕಲ್ಯಾಣಕರರು ಮುದುಕರಾದ ಮೇಲೆ
   4. ಮಧುಕರರು ಚಿಕ್ಕವರಾಗಿದ್ದಾಗ

10. ಲೇಖಕರ ಅಭಿಪ್ರಾಯದಲ್ಲಿ ತರುಣರು ಮುಂದೆ ಬರಲು
    1. ಸರಕಾರಿ ನೌಕರಿಯನ್ನೇ ಮಾಡಬೇಕು
    2. ಹೊಸ ಹೊಸ ಉದ್ದಿಮೆಗಳನ್ನು ಆರಂಭಿಸಬೇಕು
    3. ಕಾರಖಾನೆಗಳಲ್ಲಿ ದುಡಿಯಬೇಕು
    4. ಮನೆಯಲ್ಲಿ ಹಿರಿಯರಿಗೆ ಸಹಾಯ ಮಾಡಬೇಕು

11. ಪಾಟಣಕರರಂತೆ ಉದ್ದಿಮೆಗಳನ್ನು ಸ್ಥಾಪಿಸಲು
    1. ಬಹಳ ಹಣ ಬೇಕು
    2. ಸಾಹಸಬೇಕು
    3. ದೊಡ್ಡ ಪರೀಕ್ಷೆ ಪಾಸುಮಾಡಿರಬೇಕು
    4. ಸರಕಾರದ ಸಹಾಯ ಬೇಕು.

12. '' ಸಮ್ಮಿಶ್ರ ಉಪ್ಪಿನಕಾಯಿ '' ಎಂದರೆ:
    1. ಉಪ್ಪು ಕಾರ ಮಿಶ್ರ ಮಾಡಿದ್ದು
    2. ಉಪ್ಪು ಕಾರವಲ್ಲದೆ ಮಸಾಲೆಯೂ ಸೇರಿದ್ದು
    3. ಎರಡು ಅಥವಾ ಮೂರು ಕಾಯಿಗಳಿಂದ ಮಾಡಿದ್ದು
    4. ಎಲ್ಲ ಸಾಮಾನುಗಳನ್ನು ಸರಿಯಾಗಿ ಮಿಶ್ರ ಮಾಡಿದ್ದು

13. 'ಗೃಹೋದ್ಯಮ' ಎಂದರೆ:
    1. ಮನೆ ಕಟ್ಟುವ ಉದ್ಯಮ
    2. ಮನೆಯಲ್ಲಿ ಕುಳಿತೇ ಮಾಡುವ ಉದ್ಯಮ
    3. ಬಂಡವಾಳವಿಲ್ಲದೆ ನಡೆಯುವ ಉದ್ಯಮ
    4. ಶನಿ ಮಂಗಳಾದಿ ಗ್ರಹಗಳ ಕಾಟ ತಪ್ಪಿಸುವ ಉದ್ಯಮ.